ಶ್ರೀ ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ಅಡಿಕೆ ಮತ್ತು ತೆಂಗೂ ಬೆಳೆಗಾರರ ಬಗ್ಗೆ ಒಂದೇ ಒಂದು ವಿನಂತಿ ಏನೆಂದರೆ ಮಲೆನಾಡಿಗೆ ಸಂಬಂಧಪಟ್ಟಂತೆ ಈ ತೆಂಗು ಮತ್ತು ಅಡಿಕೆ ತೋಟಕ್ಕೆ ರೋಗ ಬರುತ್ತಿರುವುದು. ಇದಕ್ಕೆ ಸಂಬಂಧಪಟ್ಟಂತೆ ವಿಟ್ಲದಲ್ಲಿ ಒಂದು ಸಂಶೋಧನ ಕೇಂದ್ರ ವಿದೆ. ಮತ್ತು ಧಾರವಾಡದಲ್ಲಿ ಬಯಲು ಸೀಮೆಯಲ್ಲಿ ಒಂದು ಸಂಶೋಧನಾ ಕೇಂದ್ರವಿದೆ. ಅಂದರೆ ಮಲೆನಾಡಿಗೆ ತಕ್ಕಂಥ ವಾತಾವರಣದಲ್ಲಿ ಅಲ್ಲಿಯ ಬೆಳೆಗೆ ಸಂಶೋಧನಾ ಕೇಂದ್ರವನ್ನು ಮಾಡುವುದು ಅವಶ್ಯಕತೆ ಇದೆ. ಅಂದರೆ ಇಟ್ಟ ಕೋಸ್ಟಲ್ ಬೆಲ್ಟ, ಆದರೆ ಇದು ಬಯಲು ಸೀಮೆ.

ಅಧ್ಯಕ್ಷರು : ಅಂಕೋಲಾದಲ್ಲಿ ಒಂದು ಬೇಕು ಎಂದು ಇಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ : ಶಿರಸಿಗೂ ಒಂದು ಬೇಕು ಎಂದು ಇದೆ. ರೀತಿಯಲ್ಲಿ ಮಲೆನಾಡಿಗೆ...

ಶ್ರೀ ಅರಗದ ಜ್ಞಾನೇಂದ್ರ : ತೀರ್ಥಹಳ್ಳಿಗೂ ಒಂದು ಬೇಕು.

ಅಧ್ಯಕ್ಷರು : ಇನ್ನು ಇದರ ಮೇಲೆ ಉಪ ಪ್ರಶ್ನೆ ಇಲ್ಲ. ನೋಡಿ ಅವರೆಲ್ಲರೂ ಕೇಳಿರುವುದು ಸಂಶೋಧನಾ ಕೇಂದ್ರಗಳು ಹೆಚ್ಚಾಗಬೇಕು. ಎಲ್ಲೆಲ್ಲಿ ಈ ರೋಗ ಹಬ್ಬಿದೆ ಅಲ್ಲೆಲ್ಲಾ ಈ ರೋಗವನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಈ ರೋಗ ನಿಯಂತ್ರಣದಲ್ಲಿಲ್ಲವೆಂದು ಹೇಳಿದ್ದಾರೆ, ಅದು ನಿಯಂತ್ರಣಕ್ಕೆ ಬಂದಿದೆ. ಹೇಗೆಂದರೆ 94-95ನೇ ಸಾಲಿನಲ್ಲಿ ಬಹಳ ರೋಗ ಇತ್ತು. ಈಗಾಗಲೇ ನಾವು ಪೆರಿಸಿರೋಲ ಎನ್ನತಕ್ಕ ಪರೋಪ ಜೀವಿಗಳನ್ನು ಬಿಟ್ಟು ಅದನ್ನು ನಿಯಂತ್ರಣಕ್ಕೆ ತಂದಿದ್ದೇವೆ. ಇನ್ನೂ ಎಲ್ಲಾದರೂ ಇದೆ ಎಂದು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಿದರೆ ಅಂಥಹ ಕಡೆಗೆ ನಮ್ಮ ಮೊಬೈಲ್ ವ್ಯಾನನ್ನೇ ಕಳುಹಿಸಿ ಅದನ್ನು ನಿಯಂತ್ರಿಸುವುದಕ್ಕೆ ಸರ್ವ ಪ್ರಯತ್ನಮಾಡುತ್ತೇವೆಂದು ಹೇಳಬಯಸುತ್ತೇನೆ.

**ಬೆಳಗಾವಿ ಜಿಲ್ಲೆಯಲ್ಲಿ ಕೃಷಿ ಸಹಾಯಕರ ಹುದ್ದೆ ಭರ್ತಿ**

322 - ಶ್ರೀ ಚಂದ್ರಶೇಖರ ನಾಯಕ (ಗೋಕಾಕ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಳಗಾವಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಕೃಷಿ ಸಹಾಯಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

*ಆ) ಗೋಕಾಕ್ ತಾಲ್ಲೂಕಿನಲ್ಲಿ ಖಾಲಿ ಇರುವ ಕೃಷಿ ಸಹಾಯಕ ಹುದ್ದೆಗಳೆಷ್ಟು?*

*ಇ) ಅವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) 471.

**ತಾಲ್ಲೂಕುವಾರು ವಿವರ ಕೆಳಕಂಡಂತಿವೆ :**

| | | | | | | | |
|---|---|---|---|---|---|---|---|
| 1) | ಬೆಳಗಾಂ | - | 51 | 8) | ಚಿಕ್ಕೋಡಿ | - | 54 |
| 2) | ಖಾನಾಪುರ | - | 46 | 9) | ರಾಯಬಾಗ | - | 34 |
| 3) | ಬೈಲಹೊಂಗಲ | - | 49 | 10) | ಅಥಣಿ | - | 46 |
| 4) | ಸವದತ್ತಿ | - | 41 | 11) | ಕೃಷಿ ಪಾಠಶಾಲೆ ಅರಬಾವಿ | - | 2 |
| 5) | ರಾಮದುರ್ಗ | - | 37 | **12)** | **ಬೀಜೋತ್ಪಾದನಾ ಕೇಂದ್ರ :** | | |
| 6) | ಗೋಕಾಕ್ | - | 48 | 1) | ಅಥಣಿ | - | 1 |
| 7) | ಹುಕ್ಕೇರಿ | - | 45 | 2) | ಹುಕ್ಕೇರಿ | - | 1 |
| | | | | 13) | ಡಿಎಲಡಿಬಿ ಅಥಣಿ | - | 16 |

ಆ) 8.

ಇ) ಸರ್ಕಾರದ ಆದೇಶ ಸಂಖ್ಯೆ : ಎಹೆಚಡಿ 273 ಎಎಂಎಲ್ 95 ದಿನಾಂಕ : 31.5.95ರಂತೆ ಎರಡು ಖಾಲಿ ಕೃಷಿ ಸಹಾಯಕರರ ಹುದ್ದೆಗೆ ಬದಲಾಗಿ ಒಬ್ಬ ಕೃಷಿ ಪದವೀಧರರನ್ನು ಸಹಾಯಕ ಕೃಷಿ ಅಧಿಕಾರಿಯಾಗಿ ನೇಮಕಾತಿ ಮಾಡಿಕೊಳ್ಳಲಾಗುವುದೆಂಬ ಆದೇಶವಿರುತ್ತದೆ. ಆದುದರಿಂದ ಇನ್ನು ಮುಂದೆ ಕೃಷಿ ಸಹಾಯಕರನನ್ನು ನೇಮಕಾತಿ ಮಾಡಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಚಂದ್ರಶೇಖರ ನಾಯಕ್ : ಈಗಾಗಲೇ ಗೋಕಾಕ್ ತಾಲ್ಲೂಕಿನಲ್ಲಿದ್ದ ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರಲ್ ಆಫೀಸರ್ ಆಗಿರುವುದರಿಂದ ಅಲ್ಲಿ ಈಗ 48 ಜನ ಕೃಷಿ ಸಹಾಯಕರಾಗಿ ಕೆಲಸಮಾಡುತ್ತಿದ್ದಾರೆ. ಆದರೂ ಕೂಡ ಅಲ್ಲಿ ಇನ್ನೂ 8 ಜನ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಇಷ್ಟಾದರೂ ಅಲ್ಲಿಂದ ಇನ್ನೂ 20 ಜನ ಕೃಷಿ ಸಹಾಯಕರನ್ನು ಶಿವಮೊಗ್ಗಾ ಜಿಲ್ಲೆಗೆ ವರ್ಗಮಾಡಿದ್ದಾರೆ. ಬೇರೆ ಯಾವುದೇ ಜಿಲ್ಲೆಯಲ್ಲೂ ಈ ರೀತಿ ವರ್ಗಾವಣೆ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಹೇಳಿಕೆ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಜಿಲ್ಲೆಗೆ ಮಾತ್ರ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಏನು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಲಾಖೆಯನ್ನು ತಾ: 31.5.95ರಂದು ಪುನರ್ ಘಟನೆ ಮಾಡಿದ್ದೇವೆ. ಇದಕ್ಕೆ ಮೊದಲು ಕೆಲವುಕಡೆ ಈ ಕೃಷಿ ಸಹಾಯಕರ ಸಂಖ್ಯೆ ವಿಪರೀತವಾಗಿತ್ತು. ಉದಾಹರಣೆಗೆ ಹೇಳುವುದಾದರೆ, ಬೆಳಗಾಂ ಜಿಲ್ಲೆಯಲ್ಲಿ 133 ಜನ ಕೃಷಿ ಸಹಾಯಕರ ಸಂಖ್ಯೆ ಜಾಸ್ತಿ ಇತ್ತು. ಅದೇ ರೀತಿ ಮೈಸೂರು ಜಿಲ್ಲೆಯಲ್ಲಿ 76 ಜನ ಕಡಿಮೆ ಇದ್ದರು. ಹಾಸನದಲ್ಲಿ 90 ಜನ ಕಡಿಮೆ ಇದ್ದರು. ಕೋಲಾರ ಜಿಲ್ಲೆಯಲ್ಲಿ 172 ಜನ ಕೃಷಿ ಸಹಾಯಕರು ಕಡಿಮೆ ಇದ್ದರು. ಇವತ್ತು ನಮ್ಮ ರಾಜ್ಯದಲ್ಲಿ 5640 ಗ್ರಾಮ ಪಂಚಾಯತಿಗಳಿವೆ.

ಪ್ರತಿಯೊಂದು ಗ್ರಾಮ ಪಂಚಾಯತಿಗೂ ಒಬ್ಬೊಬ್ಬ ಕೃಷಿ ಸಹಾಯಕರನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಈಗ ನಮ್ಮಲ್ಲಿ 4238 ಕೃಷಿ ಸಹಾಯಕರ ಹುದ್ದೆಗಳಿವೆ. ಅಂದರೆ ಇನ್ನೂ 1402 ಹುದ್ದೆಗಳು ಖಾಲಿ ಇವೆ. ಇಷ್ಟೊಂದು ಕೊರತೆ ಇರುವುದರಿಂದ ಎಲ್ಲಾ ಜಿಲ್ಲೆಗಳಲ್ಲೂ ಒಂದೇ ಸಮನಾಗಿರುವಂತೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಬೆಳಗಾಂ ಜಿಲ್ಲೆಯಲ್ಲೂ ಕೊರತೆ ಇದೆ. ಇನ್ನು ಮುಂದೆ ಕೃಷಿ ಸಹಾಯಕರನ್ನು ನಾವು ನೇಮಕಾತಿ ಮಾಡಿಕೊಳ್ಳುವುದಿಲ್ಲ. ಇವರಿಗೆ ಬದಲಾಗಿ ಕೃಷಿ ಪದವೀಧರರನ್ನು ಅಧಿಕಾರಿಗಳಾಗಿ ನೇಮಿಸಿಕೊಳ್ಳಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಆದ್ದರಿಂದ ಈಗ 8 ಕೃಷಿ ಸಹಾಯಕರ ಹುದ್ದೆಗಳು ಏನು ಖಾಲಿ ಇವೆ ಇವುಗಳನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಕೃಷಿ ಪದವೀಧರರನ್ನು ನೇಮಕಾತಿ ಮಾಡಿಕೊಂಡು ಅವರ ಏರಿಯಾ ಆಫ್ ಆಪರೇಷನನ್ನು ವಿಸ್ತಾರ ಮಾಡುವ ಆಲೋಚನೆ ಸರ್ಕಾರದಲ್ಲಿದೆ ಎನ್ನತಕ್ಕ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಚಂದ್ರಶೇಖರ್ ನಾಯಕ್ : ಈಗಾಗಲೇ 20 ಜನರನ್ನು ಶಿವಮೊಗ್ಗಾ ಜಿಲ್ಲೆಗೆ ವರ್ಗಾವಣೆ ಮಾಡಲಾಗಿದೆ. ಅಲ್ಲಿ ಅವರಿಗೆ ವಸತಿ ಸೌಕರ್ಯ ಇಲ್ಲ. ಇದರ ಜೊತೆಗೆ ಭಾಷಾ ಸಮಸ್ಯೆಕೂಡ ಇದೆ. ಪರಿಸ್ಥಿತಿ ಹೀಗಿರುವುದರಿಂದ ಅವರನ್ನು ಕೇಳಿ ನಮ್ಮ ಜಿಲ್ಲೆಗಾದರೂ ಅವರನ್ನು ಡೆಪ್ಯುಟೇಷನ್ ಮೇಲೆ ಕಳುಹಿಸಿಕೊಡಿ. ಮುಂದೆ ನೀವು ಅವರಿಗೆ ಬಡ್ತಿ ನೀಡುವಾಗ ಈ ನಿಯಮವನ್ನು ಅನುಸರಿಸಬೇಕೆಂದು ನನ್ನ ವಿನಂತಿ.

ಶ್ರೀ ಸಿ. ಬೈರೇಗೌಡ : ನಾನು ಈಗಾಗಲೇ ಹೇಳಿದ್ದೇನೆ. ಬೆಳಗಾಂ ಜಿಲ್ಲೆಯಲ್ಲಿ 133 ಜನ ಹೆಚ್ಚಿಗೆ ಇದ್ದಾರೆ, ಶಿವಮೊಗ್ಗಾ ಜಿಲ್ಲೆಯಲ್ಲಿ 98 ಜನ ಕಡಿಮೆ ಇದ್ದಾರೆ. ಆದ್ದರಿಂದ ಹೆಚ್ಚಿಗೆ ಇರುವ ಕಡೆಗಳಿಂದ ಕಡಿಮೆ ಇರುವ ಕಡೆಗಳಿಗೆ ನಾವು ವಿಧಿ ಇಲ್ಲದೆ ವರ್ಗಾವಣೆ ಮಾಡಲೇಬೇಕಾಗುತ್ತದೆ. ಇದರ ಜೊತೆಗೆ ನಾನು ಒಂದು ತಾತ್ವಿಕ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು : ಬಹಳ ಮುಖ್ಯವಾದಂಥಾದ್ದು ಒಂದೋ ಎರಡೋ ಇದ್ದರೆ ಅದನ್ನು ಡೆಪ್ಯುಟೇಷನ್ ಮೇಲೆ ತೆಗೆದುಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ : ಸಾಧ್ಯವಿಲ್ಲ. ಒಂದನ್ನು ಮಾಡಿದರೆ ಸುಮಾರು 3 ಸಾವಿರ ಜನರನ್ನು ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಹೇಗೆ ಮಾಡಿದ್ದೀರೆಂದರೆ ಗುಲ್ಬರ್ಗಾದಲ್ಲಿ ಇದ್ದವನನ್ನು ಕೂರ್ಗಗೆ ಹಾಕಿದ್ದೀರಿ, ಧಾರವಾಡದಲ್ಲಿ ಇದ್ದವನನ್ನು ಚಿಕ್ಕಮಗಳೂರಿಗೆ ಹಾಕಿದ್ದೀರಿ. ಇವತ್ತು ನಿಮ್ಮ ರೂಲಿನಲ್ಲಿ ಏನಿದೆ "ಡಿ" ಗ್ರೂಪ್‌ನವರನ್ನು ಅದೇ ಜಿಲ್ಲೆಯೊಳಗೆ ಅಥವಾ ಆ ಡಿವಿಜನ್ ಒಳಗಡೆಯೇ ವರ್ಗಾವಣೆ ಮಾಡಬೇಕೆಂದು We have also made certain rules to follow. According to that, at least you should post them to the nearest places. ಕೊನೆಯ ಪಕ್ಷ ಅವರನ್ನು ಹತ್ತಿರದ ಸ್ಥಳಕ್ಕಾದರೂ ವರ್ಗಾವಣೆ ಮಾಡಿ.

ಶ್ರೀ ಮಾಮನಿ ಸಿ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯೂ ಕೂಡ ಇದೇ ಇದೆ. ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲಿ ಜಾಗ ಖಾಲಿ ಇದ್ದರೂ ಕೂಡ ಹಾಸನ ಜಿಲ್ಲೆಗೆ ಕೃಷಿ ಸಹಾಯಕರನ್ನು ವರ್ಗಾವಣೆ ಮಾಡಿದ್ದಾರೆ. ಪಕ್ಕದ ಜಿಲ್ಲೆಗೆ ವರ್ಗಾವಣೆ ಮಾಡಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಶಿವಮೊಗ್ಗ, ಹಾಸನ, ಮಡಿಕೇರಿಗಳಿಗೆ ವರ್ಗ ಮಾಡಿದರೆ "ಡಿ" ಗ್ರೂಪ್ ನೌಕರರ ಗತಿ ಏನು? ಅವರನ್ನು ಈ ರೀತಿ ವರ್ಗಮಾಡುವುದು ಸರಿಯಲ್ಲ. ಕೂಡಲೇ ಇದನ್ನು ಸರಿಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ರಾಜ್ಯದ ಒಂದು ನಕ್ಷೆಯನ್ನು ತಯಾರಿಸಿ ಇಟ್ಟಿದ್ದೇನೆ. ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹೆಚ್ಚಿಗೆ ಎಂಬುದನ್ನು ಹಸಿರು ಬಣ್ಣದಿಂದ ಗುರ್ತಿಸಿದ್ದೇವೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಾಗಲಿ ನಾವು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕೃಷಿ ಸಹಾಯಕರ ಸಂಖ್ಯೆ ಜಾಸ್ತಿ ಇದೆ. ಬೀದರನಲ್ಲಿ 17, ಗುಲ್ಬರ್ಗಾ 140, ಬಿಜಾಪುರದಲ್ಲಿ 214, ರಾಯಚೂರಿನಲ್ಲಿ 95ಜನ ಹೆಚ್ಚಿಗೆ ಇದ್ದಾರೆ.

ಅಧ್ಯಕ್ಷರು : ಹೀಗೆ ಇದ್ದುದನ್ನು ಇದ್ದಂತೆಯೇ ಹೇಳಿದರೆ ನಮ್ಮ ಕೋಲಾರ ಜಿಲ್ಲೆಯವರಿಗೆ ಕಷ್ಟ ಬರತಕ್ಕದ್ದು. ನೋಡುತ್ತೇವೆ ಎಂದು ಹೇಳಿದರೆ ಸಾಕು. ನಿಮ್ಮ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಇದನ್ನು ನೋಡುತ್ತೇನೆ ಎಂದು ಹೇಳುತ್ತಿದ್ದರು.

ಶ್ರೀ ಸಿ. ಬೈರೇಗೌಡ : ಆದ್ದರಿಂದ ಈ ವಿಚಾರವನ್ನು ಪರಿಶೀಲಿಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಕೊಪ್ಪಳ ಉಪಮಾರುಕಟ್ಟೆ ಕುರಿತು.**

323 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿ ಉಪ-ಮಾರುಕಟ್ಟೆಗಳ ಸಂಖ್ಯೆ ಎಷ್ಟು ಹಾಗೂ ಕೊಪ್ಪಳ ತಾಲ್ಲೂಕಿನಲ್ಲಿ ಮಂಜೂರಿಆದ ಉಪ ಮಾರುಕಟ್ಟೆಗಳೆಷ್ಟು?*

*ಆ) ಸದರಿ ಮಾರುಕಟ್ಟೆಯಲ್ಲಿ ಸೌಲಭ್ಯಗಳನ್ನು ಸರ್ಕಾರ ಒದಗಿಸಿದಯೇ, ಹಾಗಿದ್ದಲ್ಲಿ ಸೌಲಭ್ಯಗಳನ್ನು ಕೊಪ್ಪಳ ಉಪಮಾರುಕಟ್ಟೆಯಲ್ಲಿ ಒದಗಿಸಲು ಸಾಧ್ಯವೇ?*

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಒಟ್ಟು 323 ಉಪ-ಮಾರುಕಟ್ಟೆಗಳಿವೆ. ಕೊಪ್ಪಳ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸಂಬಂಧಸಿದಂತೆ 3 ಉಪ ಮಾರುಕಟ್ಟೆಗಳಿವೆ.

ಆ) 130 ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಕೊಪ್ಪಳ ತಾಲ್ಲೂಕಿನ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಅವಶ್ಯಕ ಕ್ರಮ ಕೈಗೊಳ್ಳಲಾಗುವುದು.